ಐಪಿಸಿ ಸೆಕ್ಷನ್ 409, 420, 120 ಬಿ ಗಳಡಿಯಲ್ಲಿ ದೂರು ದಾಖಲಾಗಿರುತ್ತದೆ. ಇದಲ್ಲದೇ, ಇದೇ ವ್ಯಕ್ತಿಗಳ ಮೇಲೆ ಗಂಗೊಳ್ಳಿ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 96:04 ಮತ್ತು ಕುಂದಾಪುರ ಠಾಣೆಯಲ್ಲಿ ಮತ್ತೊಂದು ಮೊಕದ್ದಮೆ ಸಂಖ್ಯೆ 253:04 ಕೂಡ ದಾಖಲಾಗಿರುತ್ತದೆ. ಈ ಪ್ರಕರಣಗಳು ಈಗ ಸಿಓಡಿ ತನಿಖೆಗಾಗಿ ವರ್ಗಾವಣೆಗೊಂಡಿದ್ದು ತನಿಖೆಯು ಮುಂದುವರೆದಿರುತ್ತದೆ. ತನಿಖಾ ವರದಿ ಬಂದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅಲ್ಲಿ ಇನ್ನೊಂದು ಏನಾಗಿದೆ ಎಂದರೆ, ಆಪಾದಿತರಿಗೆ ಏನಾದರೂ ತೊಂದರೆ ಕೊಟ್ಟರೆ, ಯಾರು ಕಂಪ್ಲೆನ್ಯಾನ್ಸ್ ಇದ್ದಾರೆ ಅವರ ಮೇಲೇ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಉಡುಪಿ ಪೊಲೀಸಿನವರು ನೋಟೀಸನ್ನು ಕೊಟ್ಟಿದ್ದಾರೆ. ಯಾರು ಹಣವನ್ನು ಕಳೆದುಕೊಂಡಿದ್ದಾರೆ, ಪುನಃ ಅವರಿಗೇ ನೋಟೀಸ್ ಕೊಟ್ಟಿದ್ದಾರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಅತಿ ಶೀಘ್ರದಲ್ಲಿ ಇದರ ತನಿಖೆಯನ್ನು ಮಾಡಿಸಬೇಕು ಎಂದು ಕೇಳಿಕೊಳ್ಳುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಶಾಸಕರು ಈ ವಿಚಾರವನ್ನು ಪ್ರಸ್ತಾಪ ಮಾಡಿದ ತಕ್ಷಣವೇ ಮುಖ್ಯಮಂತ್ರಿಗಳು ಆದೇಶವನ್ನು ಕಳುಹಿಸಿ ಕೊಟ್ಟಿದ್ದಾರೆ.ಮೂರು ಠಾಣೆಗಳಲ್ಲಿ ಅವರ ಮೇಲೆ ವಂಚನೆಯ ಪ್ರಕರಣಗಳ ದೂರುಗಳು ದಾಖಲಾಗಿವೆ. ಇದು ಸಿಓಡಿಗೂ ವರ್ಗವಾಗಿದೆ. ಇದು ಅಂತರರಾಜ್ಯಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದು ಆಗಿರುವುದರಿಂದ, ಇದರಲ್ಲಿ ತಮಿಳುನಾಡಿನ ಜನರೂ ಕೂಡ ಇರುವ ಕಾರಣಕ್ಕಾಗಿ ಇದು ಸಿಓಡಿಗೂ ಕೂಡ ವರ್ಗಾವಣೆಯಾಗಿದೆ.

ತಮಿಳುನಾಡು ಜನರು ಕೂಡ ಇದರಲ್ಲಿ ಇರತಕ್ಕ ಕಾರಣಕ್ಕಾಗಿ COD ಗೂ ಕೂಡ ವರ್ಗಾವಣೆಯಾಗಿದೆ. ಅದರ ವರದಿ ಬಂದ ತಕ್ಷಣ ಕ್ರಮ ಕೈಗೊಳ್ಳುತ್ತೇವೆ. ತಾವು ಹೇಳಿದಂತೆ ಇವತ್ತೇ ಪೊಲೀಸ್ ಅಧಿಕಾರಿಗಳ ಜೊತೆ ಸಂಪರ್ಕ ಮಾಡಿ ಆ ತರಹದ ಏನಾದರೊಂದು ಪ್ರಕರಣವಾಗಿ ಅವರಿಗೆ notice ಕೊಡತಕ್ಕಂಥದ್ದು ಇದ್ದರೆ ಅದನ್ನು ಕೂಡ ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸುತ್ತದೆ.

ವಿಷಯ: ಶಿಕ್ಷಕರಿಗೆ ತತ್‌ಕ್ಷಣ ವೇತನ ಬಿಡುಗಡೆ ಮಾಡುವ ಕುರಿತು.

ಶ್ರೀ ಎಂ.ಪಿ ರೇಣುಕಾಚಾರ್ಯ (ಹೊನ್ನಾಳಿ): ಮಾನ್ಯ ಅಧ್ಯಕ್ಷರೆ, ನಮ್ಮ ದಾವಣಗೆರೆ ಜಿಲ್ಲೆ ಖಾಸಗಿ ಪ್ರೌಢಶಾಲೆ ಸರ್ಕಾರಿ ಪ್ರೌಢಶಾಲೆ O.B.B. ಪರಿವರ್ತಿತ ಪ್ರಾಥಮಿಕ ಶಾಲೆಗಳಿಗೆ ಫೆಬ್ರವರಿ ತಿಂಗಳಿಂದ ಸಂಬಳವಾಗಿಲ್ಲ.

ಈಗಾಗಲೇ ಶಿಕ್ಷಕರು ದಾವಣಗೆರೆ ಜಿಲ್ಲಾ ಪಂಚಾಯತ್‌ಗೆ ಮತ್ತು ಮಂತ್ರಿಗಳಿಗೆ ಮನವಿಯನ್ನು ಮಾಡಿಕೊಂಡಿದ್ದಾರೆ. ಇವತ್ತಿನಿಂದ SSLC ಉತ್ತರ ಪತ್ರಿಕೆಗಳ ಮೌಲ್ಯಮಾಪನ ಪ್ರಾರಂಭವಾಗಬೇಕಾಗಿತ್ತು. ಸರ್ಕಾರ ನಮಗೆ ವೇತನ ಕೊಡದಿರುವುದರಿಂದ ಮೌಲ್ಯಮಾಪನ ಬಹಿಷ್ಕಾರ ಮಾಡುತ್ತೇವೆಂದು ಶಿಕ್ಷಕರು ಹೇಳಿದರು. ಆದರೆ ನಾವು ಶಿಕ್ಷಕರಿಗೆ ಮನವಿ ಮಾಡಿಕೊಂಡಿದ್ದರಿಂದ ಅವರು ಕಪ್ಪು ಬಟ್ಟೆ ಧರಿಸಿಕೊಂಡು ಇವತ್ತು ಪ್ರತಿಭಟನೆ ನಡೆಸುತ್ತಿದ್ದಾರೆ. ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ವೇತನ ಬಿಡುಗಡೆ ಮಾಡಿದೆ. ನಮ್ಮ ದಾವಣಗೆರೆಯ ಅನುದಾನಿತ ಪ್ರೌಢಶಾಲೆಗಳಿಗೆ ರೂ.67,79,000-00 ಕೊಡಬೇಕಾಗಿದೆ. ಸರಕಾರಿ ಪ್ರೌಢಶಾಲೆಗಳಿಗೆ ರೂ. 1,30,05,000-00 ಬಿಡುಗಡೆ ಮಾಡಬೇಕಾಗಿದೆ.O.B.B.ಪರಿವರ್ತಿತ ಪ್ರಾಥಮಿಕ ಶಾಲೆಗಳಿಗೆ ರು. 76 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿದೆ. ತತ್‌ಕ್ಷಣ ಶಿಕ್ಷಕರಿಗೆ ವೇತನ ಬಿಡುಗಡೆ ಮಾಡಬೇಕು. ಇವತ್ತು ಎಲ್ಲ ಶಿಕ್ಷಕರು ಹಣವಂತರು ಇರುವುದಿಲ್ಲ. ಇವತ್ತು ಶಿಕ್ಷಕರು ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದಾರೆ. ಶಿಕ್ಷಕರಿಗೆ ಪ್ರತಿ ತಿಂಗಳು ವೇತನ ಬರುತ್ತದೆಂದು ನಂಬಿ ಅವರ insurance ಇರಬಹುದು, ಬೇರೆ ಬೇರೆcommit ಮಾಡಿಕೊಂಡಿರುತ್ತಾರೆ.ಈ ಶಿಕ್ಷಕರುಗಳಿಗೆ ವೇತನವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ತಕ್ಷಣ ಸರ್ಕಾರ ಶಿಕ್ಷಕರ ನೆರವಿಗೆ ಬಂದು ವೇತನವನ್ನು ಬಿಡುಗಡೆ ಮಾಡಬೇಕೆಂದು ನಾನು ಈ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತೇನೆ. 2005-06ರಲ್ಲಿ ಮಾನ್ಯ ಹಣಕಾಸು ಸಚಿವರು 'ಶಿಕ್ಷಣ ಅಭಿವೃದ್ಧಿಯ ಅಡಿಗಲ್ಲು' ಎಂದು ಹೇಳಿದ್ದಾರೆ. "ಪ್ರಾಥಮಿಕ ಶಿಕ್ಷಣವನ್ನು ಸದೃಢಗೊಳಿಸಲು ಸರ್ಕಾರವು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಶಿಕ್ಷಣ ವಲಯಕ್ಕೆ ನೀಡುವ ಅನುದಾನ ಮೊತ್ತವನ್ನು 2004-05ನೇ ಸಾಲಿನಲ್ಲಿ ನೀಡಿದ್ದ 4,300 ಕೋಟಿ ರೂಪಾಯಿಗಳಿಂದ ಶೇಕಡ 11 ರಷ್ಟು ಹೆಚ್ಚಿಸಲು ಉದ್ದೇಶಿಸಿದ್ದು 2005-06ನೇ ಸಾಲಿನಲ್ಲಿ 4800 ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು" ಹೇಳಿದ್ದಾರೆ. ಇದು ಕೇವಲ ಸರ್ಕಾರದ ಕಡೆಯಿಂದ ಹೇಳಿಕೆ ಮಾತ್ರ ಆಗಬಾರದು. ತತ್‌ಕ್ಷಣ ಬಿಡುಗಡೆ ಮಾಡಬೇಕು. ಇವತ್ತು ನಮ್ಮ IAS ಅಧಿಕಾರಿಗಳು ತಮಗೆ ಬೇಕಾದಂತೆ ಕಾನೂನುಗಳನ್ನು ಮಾಡಿಕೊಳ್ಳುತ್ತಾರೆ. 30ನೇ ತಾರೀಕು ಸಂಬಳ ಬರಬೇಕೆಂದರೆ ಅದನ್ನು 29ನೇ ತಾರೀಕಿಗೆ ಅವರು ಹಣವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶಿಕ್ಷಕರು ಇವತ್ತು ಬೀದಿಪಾಲಾಗುತ್ತಿದ್ದಾರೆ. ಆದ್ದರಿಂದ, ದಯವಾಡಿ ತತ್‌ಕ್ಷಣ ಶಿಕ್ಷಕರ ವೇತನವನ್ನು ಬಿಡುಗಡೆ ಮಾಡುತ್ತೇವೆನ್ನುವ ಹೇಳಿಕೆಯನ್ನು ಈ ಸದನದ ಮೂಲಕ ಸರ್ಕಾರ ಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡಬಯಸುತ್ತೇನೆ.

ಶ್ರೀಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿರತಕ್ಕಂಥ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನು ಈಗಾಗಲೇ ಸಂಬಂಧಪಟ್ಟ ಸಚಿವರಿಗೆ ಈ ವಿಷಯವನ್ನು ಗಮನಕ್ಕೆ ತರಬೇಕೆಂದು ಹೇಳಿ ಕಳುಹಿಸಿಕೊಟ್ಟಿದ್ದೇನೆ. ಅವರು ಗಮನ ಸೆಳೆದಿರುವಂಥ ವಿಷಯಕ್ಕೆ ನಾಳೆ ಸದನದಲ್ಲಿ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು : ಸಿ.ಟಿ. ರವಿಯವರೇ ತಾವು ಪ್ರಸ್ತಾಪ ಮಾಡಬಹುದು.

ಶ್ರೀ ಸಿ.ಟಿ. ರವಿ: ನಾನು ಕೇಳಿದಂಥ ವಿಷಯಕ್ಕೆ ಸರ್ಕಾರದಿಂದ ಉತ್ತರ ಬಂದಿದೆ.

ಅಧ್ಯಕ್ಷರು : ಸರ್ಕಾರದಿಂದ ಉತ್ತರ ಬಂದಿದ್ದರೆ ಸರಿ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯ್ಕ್ (ಹುಕ್ಕೇರಿ): ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹಿಡ್ಕಲ್ ಜಲಾಶಯದ ರುಸ್ತುಮಪುರ ಏತ ನೀರಾವರಿ ಯೋಜನೆ 1996ರಿಂದ ಇವತ್ತಿನವರೆಗೆ ಅಂದರೆ ಕಳೆದ 10 ವರ್ಷಗಳಿಂದ ಸುಮಾರು 6 ಕೋಟಿ 75 ಲಕ್ಷ ರೂಪಾಯಿಗಳನ್ನು ಸರ್ಕಾರ ವೆಚ್ಚ ಮಾಡಿದರೂ ಅದು ಇನ್ನೂ ಕಾರ್ಯಾರಂಭವಾಗಿಲ್ಲ. ಈಗಾಗಲೇ ಕೆನಲ್‌ನಲ್ಲಿ 90 ಪರ್ಸೆಂಟ್ motor fix ಮಾಡುವಂಥ ಎಲ್ಲ ಕೆಲಸ ನಡೆದಿದ್ದರೂ ಸಹಿತ ಅಧಿಕಾರಿಗಳ ನಿರ್ಲಕ್ಷತನದಿಂದ ಅಲ್ಲಿ ಪಂಪು ವರ್ಕ್ ಆಗುತ್ತಿಲ್ಲ. ಕಳೆದ 8–10 ವರ್ಷಗಳಲ್ಲಿ ರೈತರು ಅಲ್ಲಿ ಬೆಳೆ ಬೆಳೆದಿದ್ದರೆ ಸುಮಾರು 10–15 ಕೋಟಿ ರೂಪಾಯಿಗಳಷ್ಟು ಉತ್ಪಾದನೆಯನ್ನು ಮಾಡಬಹುದಾಗಿತ್ತು. ಇದು ಅಲ್ಲಿ ತಪ್ಪಿಹೋದ ಕಾರಣ ಕಳೆದ 6 ತಿಂಗಳಿನಿಂದ ಸತತವಾಗಿ ಅಲ್ಲಿರತಕ್ಕಂಥ ಎಲ್ಲಾ ಅಧಿಕಾರಿಗಳಿಗೆ ಈ ಪಂಪನ್ನು ತ್ವರಿತವಾಗಿ ಚಾಲೂ ಮಾಡಿ ಎಂದು ಹೇಳಿದಾಗ ಇಲ್ಲಿಯವರೆಗೆ ಚಾಲೂ ಮಾಡಿಲ್ಲ. ನಾಳೆ ಒಂದನೇ ತಾರೀಖಿನಿಂದ ನಾನು ಅಲ್ಲಿ ಧರಣಿ ಉಪವಾಸ ಸತ್ಯಾಗ್ರಹವನ್ನು ಮಾಡಬೇಕೆನ್ನುವ ವಿಚಾರವನ್ನು ಇಟ್ಟುಕೊಂಡಿದ್ದೇನೆ. ಆ ಕಾರಣದಿಂದ ವಿಳಂಬಕ್ಕೆ ಕಾರಣರಾಗಿರತಕ್ಕಂಥ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ನನ್ನ ಈ ಪ್ರಶ್ನೆಗೆ ಇವತ್ತು ಈ ಸದನದ ಮೂಲಕ ಸರ್ಕಾರ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ರೈತ ಸಂಘದ ಹೋರಾಟದ ಮೂಲಕ ಬಂದಂಥವರು. ಆದ್ದರಿಂದ ತಾವು ನಾಳೆ ಪುನಃ ಧರಣಿ ಸತ್ಯಾಗ್ರಹ ಮಾಡುತ್ತೇನೆಂದು ಹೇಳುತ್ತಿದ್ದೀರಿ.